ಹೇಗಾಯ್ತು ಎಂದೆಲ್ಲ ಪ್ರಶ್ನೆಗಳನ್ನು ಕೇಳಿದರು. ವಿಷ್ಣು ದಿವ್ಯಜ್ಞಾನದಿಂದ ಎಲ್ಲವನ್ನೂ ಅದಾಗಲೇ ತಿಳಿದುಕೊಂಡಿದ್ದರೂ ಒಂದು ವ್ಯವಸ್ಥೆ ಅಂತ ಇರುವಲ್ಲಿ ವಿನಾಕಾರಣ ಹಸ್ತಕ್ಷೇಪ ನಡೆಸಬಾರದು ಎಂಬ ಕಾರಣಕ್ಕೆ ಸುಮ್ಮನಿದ್ದ. ಅಷ್ಟು ಹೊತ್ತಿಗೆ ಇಬ್ಬರು ಹೆಣ್ಮಕ್ಕಳು ಸಹಿತ ಹಲವಾರು ಹಳ್ಳಿಗರು ಓಡೋಡಿ ಬಂದರು. ಹುಡುಗನ ಸಂಬಂಧಿಕರಿರಬೇಕು ಅಂದುಕೊಂಡ ವಿಷ್ಣು, ಅವರಲ್ಲೊಬ್ಬಾತನ ಕೈಗೆ ಕಾಗದಪತ್ರಗಳನ್ನಿತ್ತು 'ಚಿಕಿತ್ಸೆಗೆ ಒಳಗೆ ಕೊಂಡುಹೋಗಿದ್ದಾರೆ, ಇಪ್ಪತ್ತೈದು ಸಾವಿರ ಅಡ್ವಾನ್ಸ್ ಕಟ್ಟಿ, ಇವಕ್ಕೆಲ್ಲ ಸಹಿಮಾಡಿಕೊಡಿ ಅಂದಿದ್ದಾರೆ' ಅಂದ. 'ಅಯ್ಯೋ' ಎಂದು ಎದೆ ಹೊಡೆದುಕೊಂಡು ಅಳಲಾರಂಭಿಸಿದ. ಹೆಂಗಸರನ್ನು ಸಮಾಧಾನಿಸುತ್ತ ಕುಟುಂಬದ ಗಂಡಸರು ಹಣ ಹೊಂದಿಸುವ ಯತ್ನಕ್ಕಿಳಿದರು.

ದೂರದಲ್ಲಿ ಯಮಕಿಂಕರರು ಕಾಣಿಸಿದರು. ವಿಷ್ಣು ನರ್ಸ್ ವೇಷ ಧರಿಸಿಕೊಂಡು ಅವರನ್ನು ಹಿಂಬಾಲಿಸಿದ. ಸದ್ದುಗದ್ದಲ, ಬೊಬ್ಬೆ, ಗಡಿಬಿಡಿ, ಡಾಕ್ಟರ್ ನರ್ಸುಗಳ ಓಡಾಟ ಜಾಸ್ತಿಯಾಗುತ್ತಿದ್ದಂತೆ ಕಿಂಕರರು ತಮ್ಮ ಪಾಶ ಬೀಸಿ ಎಮರ್ಜೆನ್ಸಿ ಕೋಣೆಯಲ್ಲಿ ಚಿಕಿತ್ಸೆಗಾಗಿ ಮಲಗಿದ್ದ ಹುಡುಗನ ದೇಹದಿಂದ ಅದಾಗಲೇ ತಮ್ಮೊಂದಿಗೆ ಹೊರಟು ಬರಲು ತಯಾರಾಗಿದ್ದ ಆತ್ಮವನ್ನು ಸೆಳೆದು ನಡೆದೇ ಬಿಟ್ಟರು.

'ಪೂವರ್ ಗೈ' ಅಂದರು ಚಿಕಿತ್ಸೆಗೆ ಸಿದ್ಧರಾಗಿ ಬಂದಿದ್ದ ಹಿರಿಯ ಡಾಕ್ಟರರು.

'ಸರ್, ಅರ್ಜೆಂಟಾಗಿ ಎರಡು ಕಣ್ಣುಗಳು ಬೇಕಿತ್ತು... ಚಾನ್ಸು ಇದ್ದಾಗ ತಿಳಿಸು ಅಂದಿದ್ದಾರೆ ಡೈರೆಕ್ಟರರು' ಅಂದರೊಬ್ಬ ಜ್ಯೂನಿಯರ್ ಡಾಕ್ಟರ್.

'ಸರಿ, ಪ್ಲಾಸ್ಟಿಕ್ ಕಣ್ಣು ರೆಡಿ ಇದೆಯಾ? ಐ ಸ್ಪೆಶಲಿಸ್ಟಿಗೆ ಹೇಳು... ಅವರು ಕಣ್ಣು ತೆಗೆದು ಪ್ಲಾಸ್ಟಿಕ್ ಕಣ್ಣು ಸಿಕ್ಕಿಸಿ ಹೋಗಲಿ. ಆಮೇಲೆ ಡೆಡ್ ಬಾಡಿ ರಿಲೀಸ್ ಮಾಡುವಾಗ ಕಣ್ಣುರೆಪ್ಪೆಗಳು ಮುಚ್ಚಿದ್ದನ್ನು ಕನ್ಫರ್ಮ್ ಮಾಡಿಕೋ, ಯಾರಿಗೂ ಸಂದೇಹ ಬರಬಾರದು. ನಾನು ತಲೆಗೆ ಅಲ್ಲಲ್ಲಿ ಹೊಲಿಗೆ ಹಾಕಿ ಹೋಗುತ್ತೇನೆ. ಹೊರಗೆ ಕ್ರೌಡಿಗೆ ಗಾಯಾಳು ಬಗ್ಗೆ ಈಗಲೇ ಹೇಳುವುದಕ್ಕಾಗುವುದಿಲ್ಲ, ಅರ್ಧಗಂಟೆಯಲ್ಲಿ ಆಪರೇಶನ್ ಮಾಡುತ್ತೇವೆ, ಬ್ಲಡ್ ಬೇಕು ಅಂತ ಅನ್ನು, ಪೇಶಂಟನ್ನು ಉಳಿಸಲು ನಾವು ಪರಿಶ್ರಮ ಪಟ್ಟಿದ್ದೇವೆ ಎಂದು ತಿಳ್ಕೊಳ್ಳುತ್ತಾರೆ. ಉಳಿದದ್ದನ್ನೆಲ್ಲ ನೀನೇ ಮ್ಯಾನೇಜ್ ಮಾಡು' ಅನ್ನುತ್ತ ಡೆಡ್ ಬಾಡಿಯ ಹೊಲಿಗೆ ಕೆಲಸಕ್ಕೆ ಸಿದ್ಧರಾದರು...

ವಿಷ್ಣು ದಿಗ್ಭ್ರಮೆಗೊಂಡಿದ್ದ. ಮಾನವರು ಒಬ್ಬರ ದೇಹದಿಂದ ಅಂಗಾಂಗಗಳನ್ನು ತೆಗೆದು ಇನ್ನೊಬ್ಬರಿಗೆ ಕಸಿ ಮಾಡಲು ಆರಂಭಿಸಿದ್ದು ದೇವರುವರ್ಗದ ತಮಗೆಲ್ಲ ತಿಳಿದಿತ್ತು. ಬ್ರಹ್ಮದೇವನೇ 'ಆಯುಷ್ಯ ಬರೆಯುವಾಗ ನನ್ನಿಂದ ಒಮ್ಮೊಮ್ಮೆ ಪ್ರಮಾದ ಆಗಿ ಹೋಗುವುದುಂಟು, ಸಣ್ಣಪ್ರಮಾಣದಲ್ಲಿ ಅಂಗಾಂಗ ಕಸಿ ನಡೆಯಲಿ, ಹಾಗಾದರೂ ನನ್ನ ಕೆಲ ಪ್ರಮಾದಗಳಿಗೆ ಪರಿಹಾರ ಸಿಗಲಿ' ಅಂತ ಹೇಳಿ ನಿಯಮ ಸಡಿಲಿಕೆ ಮಾಡಿಕೊಟ್ಟಿದ್ದ. ಆದರೆ ಇಲ್ಲಿ ನಡೆಯುತ್ತಿರುವುದೇನು!

ಕ್ರೋಧಗೊಂಡ ವಿಷ್ಣು ಅಲ್ಲಿ ನಿಲ್ಲಲಾರದೆ ಹೊರಬಂದ. ಸಕಲ ಜೀವಜಂತುಗಳಲ್ಲಿ ಮಾನವ ಜನ್ಮ ಶ್ರೇಷ್ಠವಾದದ್ದು. ಅದನ್ನು ಅರಿತುಕೊಂಡೇ ಹಣಗಳಿಸುವ ದುರಾಸೆಯನ್ನು ವ್ಯಾಪಕವಾಗಿ ಬೆಳೆಸಿಕೊಂಡ ವಿದ್ಯಾವಂತ ಮಾನವ ಇಂದು ಮರಣಶಯ್ಯೆಯಲ್ಲಿರುವವರಿಂದ ಅಂಗಾಂಗಗಳನ್ನು ಕದ್ದು ಮಾರುವ ಮಟ್ಟಕ್ಕೆ ಇಳಿದಿದ್ದಾನೆಂದರೆ ಕಲ್ಕಿಯ ಅವತಾರ ಎತ್ತದೆ ವಿಧಿಯಿಲ್ಲ. ಆದಷ್ಟು ಬೇಗ ವೈಕುಂಠಕ್ಕೆ ತೆರಳಿ ಕಲ್ಕಿಯ ಅವತಾರದ ಸಿದ್ಧತೆ ಮಾಡಿಕೊಳ್ಳಬೇಕು ಎಂದು ಯೋಚಿಸುತ್ತಾ ನೇರ ತಾನಿದ್ದ ಗರ್ಭಗುಡಿಗೆ ಬಂದ.

ಗರ್ಭಗುಡಿಯ ಒಳಗೆ ಲಕ್ಷ್ಮಿ ಎದ್ದು ತಾನೇ ಸಿಂಗಾರ ಮಾಡಿಕೊಂಡಿದ್ದು ಸಾಲದ್ದಕ್ಕೆ ಪೂಜೆಯ